

ಎಲ್ಲಾ ಭಾಷೆಗಳಲ್ಲಿರುವಂತೆಯೇ ಹಿಂದಿಯಲ್ಲೂ ಕೂಡ ಪುರುಷ ದೃಷ್ಟಿಕೋನವೇ ಸಾಹಿತ್ಯ ಪರಂಪರೆಯನ್ನು ರೂಪಿಸಿದೆ. ಮಲ್ಲಿಕಾ ಪಶ್ಚಿಮ ಬಂಗಾಳದವರು. ಆದರೆ ವಾರಾಣಸಿಗೆ ಬಂದು ನೆಲೆಸಿದರು. ಅವರು ಹಿಂದಿಯ ಮಹಾನ್ ಲೇಖಕ ಭಾರತೇಂದು ಹರಿಶ್ಚಂದ್ರರ ಗೆಳತಿಯೂ ಹೌದು, ಪ್ರೇಯಸಿಯೂ ಹೌದು. ಇಂಥ ಸಂಬಂಧಗಳನ್ನು ನಾನು ಹೆಚ್ಚು ವಿವರಿಸಲು ಹೋಗುವುದಿಲ್ಲ. ಆಕೆ ಮಹಾನ್ ಪ್ರತಿಭಾವಂತೆ. ಆ ಕಾಲದಲ್ಲಿ ಅಂದರೆ ಹಿಂದಿಯ ಆಧುನಿಕ ಸಾಹಿತ್ಯ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಈ ಹೆಣ್ಣುಮಗಳು ಕವಿತೆ, ಕತೆ, ಲೇಖನ, ವಿಮರ್ಶೆ ಎಲ್ಲವನ್ನೂ ಬರೆದರು. ಸಾಹಿತ್ಯ ಪತ್ರಿಕೆಯನ್ನೂ ತರುತ್ತಿದ್ದರು. ಸಾಹಿತ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡರು. ಭಾರತೇಂದು ಹರಿಶ್ಚಂದ್ರರು ಕೂಡ ಇವಳ ಪ್ರತಿಭೆಯಿಂದ ಸಾಕಷ್ಟು ಪಡೆದುಕೊಂಡಿದ್ದಾರೆ. ಅವರ ಹಲವು ಬರಹಗಳಲ್ಲಿ ಮಲ್ಲಿಕಾರ ಪ್ರಭಾವವಿದೆ. ತಾವೇನೇ ಬರೆಯಲಿ ಮಲ್ಲಿಕಾರೆದುರು ಓದುತ್ತಿದ್ದರು. ನನಗಿರುವ ಇನ್ನೊಂದು ಅನುಮಾನವೆಂದರೆ ಮಲ್ಲಿಕಾ ತಾವು ಬರೆದ ಕೆಲ ಬರಹಗಳನ್ನು ಭಾರತೇಂದು ಅವರ ಹೆಸರಿನಲ್ಲಿ ಪ್ರಕಟಿಸಿದ್ದಾರೆ ಅಂತ. ಯಾಕೆಂದರೆ ಹೆಣ್ಣುಮಗಳೊಬ್ಬಳು ಆ ತರಹ ಬರೆಯುವುದನ್ನು ಸಮಾಜ ಅನುಮಾನದಿಂದ ನೋಡುತ್ತಿತ್ತು. ಅವರ ಬರಹಗಳನ್ನು ಸಂಪಾದಿಸುತ್ತಿದ್ದಾಗ ನನಗೆ ಅಂಥ ಬರಹಗಳು ಸಿಕ್ಕವು. ಆದರೆ ಯಾಕೋ ಏನೋ ಪಂಡಿತ ಮಂಡಳಿಯು ಮಲ್ಲಿಕಾರ ಸಾಹಿತ್ಯವನ್ನು ಚರ್ಚಿಸಲೇ ಇಲ್ಲ. ಅವರಿಗೆ ನ್ಯಾಯಯುತವಾಗಿ ಸಿಗಬೇಕಾದ ಪಾಲನ್ನು ಕೊಡಲೇ ಇಲ್ಲ. ನಾವೀಗ ಭಾರತೇಂದು ಯುಗವೆಂದು ಯಾವುದನ್ನು ಕರೆಯುತ್ತಿದ್ದೇವೆಯೊ ಅದು ಮಲ್ಲಿಕಾಳ ಯುಗ ಕೂಡ ಹೌದು.

ಮಲ್ಲಿಕಾ ಕೇವಲ ಭಾರತೇಂದು ಅವರ ಗೆಳತಿ ಮಾತ್ರ ಆಗಿರಲಿಲ್ಲ. ಭಾರತೇಂದು ಅವರ ಪ್ರತಿಯೊಂದು ಹೆಜ್ಜೆಯಲ್ಲೂ ಹೆಜ್ಜೆಯಿಟ್ಟು ನಡೆದಿದ್ದಾರೆ. ಭಾರತೇಂದು ಅವರ ಪ್ರತಿಯೊಂದು ಬರಹದ ಹಿಂದೆ ಮಲ್ಲಿಕಾರ ಕೊಡುಗೆಯಿದೆ. ಆದರೆ ಅದರಲ್ಲಿ ಅವರ ಹೆಸರಿಲ್ಲ. ಮಲ್ಲಿಕಾ ಅನೇಕ ಕಡೆ ತಮ್ಮ ಹೆಸರನ್ನು ಬದಲಿಸಿಕೊಂಡು ಬರೆದಿದ್ದಾರೆ. ಅಜ್ಞಾತ ಲೇಖಕಿಯಾಗಿ ಕಾಣಿಸಿಕೊಳ್ಳಲು ಇಚ್ಛಿಸಿದ್ದಾರೆ. 19ನೇ ಶತಮಾನದಲ್ಲಿ ಬಹುತೇಕ ಭಾಷೆಗಳಲ್ಲಿ ಕಂಡುಬರುವ ಅಜ್ಞಾತ ಹೆಸರುಗಳ ಬರಹಗಾರರು ಸಾಮಾನ್ಯವಾಗಿ ಮಹಿಳೆಯರೇ ಆಗಿದ್ದಾರೆ. ಅವರಿಗೆ ಸಮಾಜದ ಭಯವಿತ್ತು. ತಮ್ಮ ಹೆಸರನ್ನು ಮುಚ್ಚಿಟ್ಟುಕೊಂಡು ಬರೆಯತೊಡಗಿದರು. ಇದೊಂದು ರೀತಿಯಲ್ಲಿ ಅವರಿಗೆ ಸುರಕ್ಷಾ ಕವಚವಾಗಿತ್ತು. ಮಲ್ಲಿಕಾಚಂದ್ರ ಆ್ಯಂಡ್ ಕಂಪನಿ ಹೆಸರಿನಲ್ಲಿ ಆಕೆ ಪ್ರಕಾಶನ ಸಂಸ್ಥೆ ನಡೆಸಿದರು. ಬಹುಶಃ ಹಿಂದಿಯ ಮೊದಲ ಪ್ರಕಾಶಕಿ, ಸಂಪಾದಕಿ, ಸಂಘಟಕಿ, ಸಂಯೋಜಕಿ ಮತ್ತು ಲೇಖಕಿ. ಇಷ್ಟೆಲ್ಲಾ ಕೊಡುಗೆ ಅವರದಿದೆ. ಆದರೆ ಆ ಕಾಲದ ಪುರುಷಕೇಂದ್ರಿತ ದೃಷ್ಟಿಕೋನ ಭಾರತೇಂದು ಅವರನ್ನು ಗುರುತಿಸಿತೇ ಹೊರತು ಮಲ್ಲಿಕಾರನ್ನು ಗುರುತಿಸಲಿಲ್ಲ. ಹಿಂದಿ ಸಾಹಿತ್ಯದ ಆಧುನಿಕ ಬರಹವನ್ನು ರೂಪಿಸಿದ ಇಂಥ ಚೇತನವನ್ನು ಚರ್ಚಿಸುವುದು ಅಗತ್ಯವೆಂದು ನನಗೆ ತೋರಿತ್ತು. ಹೀಗಾಗಿ ಮಲ್ಲಿಕಾ ಸಮಗ್ರವನ್ನು ಸಂಪಾದಿಸಿದೆ. ಇನ್ನಾದರೂ ಹಿಂದಿಯ ಮಡಿವಂತಿಕೆಯ ಜಗತ್ತು ಅವರನ್ನು ನೋಡುವ ದೃಷ್ಟಿಕೋನಗಳು ಬದಲಾಗುತ್ತದೆಂದು ನಂಬಿರುವೆ. ●